ಸ್ಥಿತಿ.

## 7

ರುಕ್ಮಿಣಿ ಸಿರಿಯುಳ್ಳ ಮನೆಯಲ್ಲಿ ಹುಟ್ಟಿದ್ದಳು. ಅವಳ ತಂದೆ ಉನ್ನತೋದ್ಯೋಗಿ. ಆದರೆ ಸ್ವಾರ್ಥ ಪ್ರೇರಿತ ರಾಜಭಕ್ತಿ ಅವರ ಮನಗಳಲ್ಲಿ ಇಟ್ಟ ಕೋಟೆ. ಹೊರಜಗತ್ತಿನಲ್ಲಿನ ವ್ಯವಹಾರಗಳು ಅವರ ಕಿವಿಗೆ ಬೀಳವು. ಬಡಬಗ್ಗರ ಕಷ್ಟನಿಷ್ಠುರಗಳು, ವಿದೇಶಿ ವಸ್ತುಗಳಿಂದ ಅನರ್ಥಗಳು, ಪರಾಧೀನ ಭಾರತ ದೇಶದ ತೊಂದರೆಗಳನ್ನು ಅವರೆಂದೂ ಕೇಳಿದ ಸಂಗತಿಗಳಲ್ಲ. ಮನೆಯಲ್ಲಿನ ಹೆಂಗಸರು ನಾಲ್ಕು ಜನ ಒಂದು ಕಡೆ ಕುಳಿತಿದ್ದಾಗ ಅವರ ಪ್ರಸಂಗದ ವಿಷಯಗಳು ಸೀರೆಗಳು, ಒಡವೆಗಳು, ಇಲ್ಲವಾದರೆ ಭಕ್ಷ್ಯಗಳು, ಪಲ್ಯಗಳು, ಕಾಫಿ- ಟೀಗಳು, ಇಂತಹ ಭೋಗ ಪ್ರಪಂಚದಲ್ಲಿ ಹುಟ್ಟಿ ಬೆಳೆದುದರಿಂದ ರುಕ್ಮಿಣಿಯ ಜ್ಞಾನವೂ ಇವನ್ನು ಮೀರಿದ್ದಿಲ್ಲ. ಸತ್ಯಾಗ್ರಹ ಹೋರಾಟದಿಂದ ದೇಶ ಕುದಿಯುತ್ತಿದ್ದರೂ ಅದರ ಬಗ್ಗೆ ಅವಳು ಕೊಂಚವೂ ಚಿಂತಿಸಿದ್ದಿಲ್ಲ. ಇಂದು ತನ್ನ ದೇಶದಲ್ಲಿ ತಯಾರಾದ ವಸ್ತ್ರಗಳನ್ನು ತಾನು ಧರಿಸಿ, ಇತರರನ್ನೂ ಧರಿಸಿರೆಂದು ಹೇಳಿದ್ದಕ್ಕೆ ತನ್ನ ಗಂಡನಿಗೆ ಕಳ್ಳರಿಗೆ, ದರೋಡೆಕೋರರಿಗೆ, ಹಂತಕರಿಗೆ ವಿಧಿಸಿದಂತೆ ಕಠಿಣ ಶಿಕ್ಷೆ ವಿಧಿಸಿದರೆಂದು ಕೇಳಿ ರುಕ್ಮಿಣಿ ಆಶ್ಚರ್ಯಚಕಿತಳಾದಳು.

'ಏನು? ನಮ್ಮ ದೇಶದ ಬಟ್ಟೆ ನಾವು ತೊಡುವುದೂ ತಪ್ಪೇ? ಇಂದಿದಾಯಿತು, ನಾಳೆ ನಿಮಗೆ ಆಹಾರ ಪದಾರ್ಥಗಳನ್ನು ನಾವೇ ಸಿದ್ಧಪಡಿಸಿ ಕಳುಹಿಸುವೆವೆಂದು, ನೀವು ತಯಾರಿಸಿಕೊಳ್ಳಬಾರದೆಂದರೆ, ನಮ್ಮ ಒಲೆಗಳನ್ನು ಅಗೆದು ಹಾಕಬೇಕಾದ್ದೇನಾ? ಎಂತಹ ಅಧಮ ಬದುಕು. ನನ್ನ ಗಂಡ ನನ್ನೊಡನೆ ಮಾತನಾಡಲಿಲ್ಲವೆಂದು ಎಷ್ಟೋ ವೇದನೆ ಪಟ್ಟೆ. ಆದರೆ ಕಾರಣ ತಿಳಿದುಕೊಳ್ಳದೆ ಹೋದೆ. ನಾನು, ಮಗು ಧರಿಸಿದ್ದ ವಿದೇಶಿ ವಸ್ತ್ರಗಳೇ ಅವರಿಗೆ ಅಸಹ್ಯ ಕಾರಣವಾಗಿದ್ದಿರಬಹುದು. ವಿದೇಶಿ ವಸ್ತ್ರಗಳಲ್ಲಿ ನೈಸು, ನಾಜೂಕು ಇದೆ ಅಂದುಕೊಳ್ಳುತ್ತಿದ್ದೆವು. ಆದರೆ ಅವುಗಳಲ್ಲಿ ಇಷ್ಟು ಪರಾಧೀನತೆ ಇರುವುದೆಂದು ಗಮನಿಸಲಿಲ್ಲ. ಛೀ! ನನ್ನ ಪತಿಗೆ ಅಪ್ರಿಯವಾದುದೇ ಅಲ್ಲದೆ ಶಿಕ್ಷೆಗೆ ಕಾರಣವಾದ ಈ ವಿದೇಶಿ ವಸ್ತ್ರಗಳು ನನಗೇಕೆ?' ಎಂದು ಯೋಚಿಸಿ ರುಕ್ಮಿಣಿ ಕೂಡಲೇ ತನ್ನ ವಿದೇಶಿ ವಸ್ತ್ರಗಳನ್ನು ತೊರೆದಳು. ಈಗವಳು ಖದ್ದರು ವಸ್ತ್ರಧಾರಿ. ಹಿಂದೆ ಮಹಡಿ ಮೇಲಿನ ರುಕ್ಮಿಣಿಯ ಕೋಣೆಯಲ್ಲಿ ಯಾವ ಹಾರ್ಮೋನಿಯಂ ವಾದ್ಯವೋ, ಪಿಟೀಲು ವಾದ್ಯವೋ ಕೇಳಿಬರುತ್ತಿತ್ತು. ಈಗ ಎಲ್ಲ ವೇಳೆಯಲ್ಲಿ ಚರಕದ ನಿನಾದ.

## 8

ಗೋಪಾಲರಾಯ ಬಳ್ಳಾರಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ. ಜೈಲಿನಲ್ಲಿ ಊಟ ಸರಿ ಬೀಳಲಿಲ್ಲವೆಂದು ತುಂಬಾ ನವೆದು ಹೋಗಿರುವನೆಂದು, ಆಮಶಂಕೆ ಬೇಧಿಯಾಗುತ್ತಿದೆಯೆಂದು, ಸ್ಥಳ ಬದಲಾಯಿಸಿರುವರೆಂದು, ಏನೇನೋ ಸುದ್ದಿಗಳು ಬರುತ್ತಿದ್ದವಾದರೂ ತಂದೆ, ಮಾವನವರ ಬಲವಂತದಿಂದ ಗೋಪಾಲರಾಯ ಕ್ಷಮಾಪಣೆ ಪತ್ರ ಕೊಟ್ಟು ಬರುವನೆಂಬ ಸುದ್ದಿಯನ್ನು ಮಾತ್ರ ಕನಸಿನ ಸುದ್ದಿ ಮಾಡಿದ್ದ ಗೋಪಾಲರಾಯ. ರುಕ್ಮಿಣಿಗೆ ಬೇರೆ ಕೆಲಸವಿಲ್ಲ. ಅವಳ ಚಿತ್ತ ಗಂಡನ ಮೇಲೆ, ಕೈಯಿ ಚರಕದ ಮೇಲೆ. ಗೋಪಾಲರಾಯ ಜೈಲಿಗೆ ಹೋಗಿ ಸುಮಾರು ಐದು ತಿಂಗಳುಗಳಾಗಿದ್ದವು. ಈ ಐದು ತಿಂಗಳಲ್ಲಿ ಅವಳು ಗಂಡನಿಗಾಗೊಂದು ಜೊತೆ ಉತ್ತರೀಯವನ್ನು, ಜೊತೆ ಧೋತಿಯನ್ನು, ಒಂದು ಅಂಗಿಯ ತಾನನ್ನು ತನ್ನ ಸ್ವಂತದ ನೂಲಿನಿಂದ ನೇಯಿಸಿ ಇಟ್ಟಿದ್ದಳು. ಅಳಿಯ ಜೈಲು ಸೇರಿದ್ದನ್ನು ಕೇಳಿದಾಗಲೇ ತಂದೆ ಬಂದು, 'ಮಗಳೇ ಇನ್ನು ನೀನು ಇಲ್ಲೇಕೆ? ಅವನು ಬರುವವರೆಗೆ ನಮ್ಮ ಮನೆಯಲ್ಲೇ ಇರುವಿಯಂತೆ ಬಾ' ಎಂದು ರುಕ್ಮಿಣಿಯನ್ನು ಕರೆದ. ರುಕ್ಮಿಣಿ ಮಾತಾಡಲಿಲ್ಲ. ಕೆನ್ನೆಗಳ ಮೇಲೆ ಇಳಿದ ಕಣ್ಣೀರನ್ನು ಉಗುರ ಕೊನೆಯಿಂದ ಚಿಮ್ಮಿ, ಸೀರೆ ಸೆರಗಿನಿಂದ ತೇವವನ್ನು ಒರೆಸಿಕೊಂಡಳು. ತಂದೆ ಮತ್ತೆ ಆ ಪ್ರಸ್ತಾವನೆ ಮಾಡಲಿಲ್ಲ.

## 9

ಸಂಕ್ರಾಂತಿ ಹಬ್ಬ ಬಂದಿತು. ಹೋದಳು. ಆದರೆ

